ದಿನಾಂಕ 28-03-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ನೇ ಪ್ರತಿವಾದಿಯ ಪರ ಶ್ರೀ ಎ.ಎಫ್.ಸಿ ವಕೀಲರಿಂದಃ**

ನಾನು ಶಂಕ್ರಿಕೊಪ್ಪ ಗ್ರಾಮದ ನಿವಾಸಿ. ನಾನು ವ್ಯವಸಾಯ ಮಾಡುತ್ತೇನೆ. ವ್ಯವಸಾಯವನ್ನು ಹೊರತುಪಡಿಸಿ ಇತರ ಕೆಲಸವನ್ನು ಮಾಡುವುದಿಲ್ಲ. ನನ್ನ ಜಮೀನು ಗಳು ಶಂಕ್ರಿಕೊಪ್ಪ ಗ್ರಾಮದಲ್ಲಿ ಇರುತ್ತವೆ. ಶಂಕ್ರಿಕೊಪ್ಪ ಗ್ರಾಮವನ್ನು ಹೊರತುಪಡಿಸಿ ಬೇರೆ ಗ್ರಾಮಗಳಲ್ಲಿ ನನ್ನ ಜಮೀನುಗಳು ಇರುವುದಿಲ್ಲ. ಶಂಕ್ರಿಕೊಪ್ಪ ಗ್ರಾಮದಲ್ಲಿ ನನ್ನ ಪ್ರತ್ಯೇಕ ಹೆಸರಿನಲ್ಲಿ 24 ಗುಂಟೆ ಜಮೀನು ಇದ್ದು ಮತ್ತು ನನ್ನ ಕುಟುಂಬ ಮತ್ತು ನನ್ನ ಜಂಟಿ ಹೆಸರಿನಲ್ಲಿ 2 ಎಕರೆ 1 ಗುಂಟೆ ಜಮೀನು ಇದೆ. ವೀರಭದ್ರಪ್ಪನ ಮಗ ಸಾಕ್ಷಿ ಹೇಳುವಂತೆ ಕರೆದುಕೊಂಡು ಬಂದಿದ್ದರಿಂದ ಇಂದು ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದರೆ ಸಾಕ್ಷಿಯು ಅವರು ದಾವೆಗೆ ಸಂಬಂಧಪಟ್ಟಂತೆ ನನಗೆ ಗೊತ್ತಿರುವ ವಸ್ತು ಸಂಗತಿಗಳನ್ನು ತಿಳಿಸುವಂತೆ ಹೇಳಿದ್ದರಿಂದ ನನಗೆ ತಿಳಿದಿರುವ ಸಂಗತಿಗಳನ್ನು ನ್ಯಾಯಾಲಯದಲ್ಲಿ ಹೇಳಲು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

2. ದಾವಾ ಜಮೀನಿನಲ್ಲಿ ಒಟ್ಟು ವಾದಿ, ಪ್ರತಿವಾದಿಯರಿಗೆ ಆರು ಹಿಸ್ಸೇಯ ಹಕ್ಕು ಇದ್ದು, ಆದರೆ 1/5 ರ ಹಿಸ್ಸೇ ಆಗಿರುತ್ತದೆ. ವೀರಭದ್ರಪ್ಪ ಅವರು ತಮ್ಮ ಜೀವಿತಾವಧಿಯಲ್ಲಿ ದಾವಾ ಆಸ್ತಿಗೆ ಸಂಬಂಧಪಟ್ಟ ಕಂದಾಯ ದಾಖಲಾತಿಗಳನ್ನು ತೋರಿಸಿ ಅವುಗಳನ್ನು ನಾನು ನೋಡಿದಾಗ ಸರಿಯಾದ ಹಿಸ್ಸೇ ಆಗಿರುವುದಿಲ್ಲ ಎಂದು ನನಗೆ ಗೊತ್ತಾಗಿರುತ್ತದೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ದಾಖಲಾತಿಯಾದ ಡ ಮಂಜೂರಿ ಆದೇಶವನ್ನು ನೋಡಿರುತ್ತೇನೆ. ಸದರಿ ಡ ಮಂಜೂರಿ ಆದೇಶವನ್ನು 1 ನೇ ಪ್ರತಿವಾದಿ ನೀಡಿದ ಅರ್ಜಿಯ ಮೇಲೆ ಮಾಡಿದ್ದು, ಅದರ ಸಂಖ್ಯೆ ನನಗೆ ಗೊತ್ತಿರುವುದಿಲ್ಲ. ಸದರಿ ಡ ಮಂಜೂರಿಯಲ್ಲಿ ಯಾವ ಸಂಗತಿಗಳನ್ನು ನಮೂದಿಸಲಾಗಿತ್ತು ಎಂದು ಗೊತ್ತಿಲ್ಲ.

3. ಪ್ರಸ್ತುತ ಶಂಕ್ರಿಕೊಪ್ಪ ಗ್ರಾಮದಲ್ಲಿ ಒಂದು ಎಕರೆ ವ್ಯವಸಾಯದ ಜಮೀನಿಗೆ ರೂ.15,00,000/- ಮೌಲ್ಯ ಇರುತ್ತದೆ. ವ್ಯವಸಾಯದ ಜಮೀನಿನ ಪೈಕಿ ಕೆಂಪು ಮಣ್ಣಿನ ಜಮೀನಿಗೆ ಎಕರೆಗೆ ರೂ.15,00,000/- ಮೌಲ್ಯ ಇದ್ದು, ಕಪ್ಪು ಬಣ್ಣದ ಜಮೀನಿಗೆ ಎಕರೆಗೆ ರೂ.13,00,000/- ಮೌಲ್ಯ ಇರುತ್ತದೆ. ಖುಷ್ಕಿ ಜಮೀನಿನಲ್ಲಿ ಒಂದು ವರ್ಷಕ್ಕೆ ಒಂದೇ ಫಸಲನ್ನು ಬೆಳೆಯಲಾಗುತ್ತದೆ. ನೀರಾವರಿ ಜಮೀನಿನಲ್ಲಿ 2 ರಿಂದ 3 ಫಸಲನ್ನು ಬೆಳೆಯಲಾಗುತ್ತದೆ ಎಂಬ ಸೂಚನೆಗೆ ಸಾಕ್ಷಿಯು 2 ಫಸಲನ್ನು ಮಾತ್ರ ಬೆಳೆಯಬಹುದು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ನೀರಾವರಿ ಜಮೀನಿನ ಮೌಲ್ಯವು ಖುಷ್ಕಿ ಜಮೀನಿನ ಮೌಲ್ಯಕ್ಕಿಂತ ಹೆಚ್ಚಿಗೆ ಇರುತ್ತದೆ ಎಂದರೆ ಸರಿ.

4. ಮೃತ ವಾದಿ ವೀರಭದ್ರಪ್ಪ ಅವರ ತಂದೆಯಾ ಹೆಸರು ಬುರಾಣಪ್ಪ. ಆತನಿಗೆ ವೀರಬಸಪ್ಪ ಮತ್ತು ಮಲ್ಲಿಕಾರ್ಜುನಪ್ಪ ಎಂಬ ಇಬ್ಬರು ಗಂಡು ಮಕ್ಕಳು ಮತ್ತು ಸಾವಂತ್ರವ್ವ ಮತ್ತು ಲಲಿತವ್ವ ಎಂಬ ಇಬ್ಬರು ಹೆಣ್ಣು ಮಕ್ಕಳು. ಈ ದಾವೆಯನ್ನು ಮಲ್ಲಪ್ಪ ರವರ ವಿರುದ್ದ ಮಾತ್ರ ಸಲ್ಲಿಸಿದ್ದಾರೆ. ಈ ದಾವೆಯ ಸಂಗತಿಗಳ ಬಗ್ಗೆ ಮತ್ತು ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಯಾವುದೇ ಸಂಗತಿಗಳು ತಿಳಿಯದೇ ಇದ್ದರೂ ಮೃತ ವೀರಭದ್ರಪ್ಪ ರವರ ಮಗನ ಮಾತನ್ನು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ಸಾಕ್ಷಿಗೆ ನಿ.ಪಿ-3 ರ ಡ ಸಂಖ್ಯೆ 678 ನ್ನು ತೋರಿಸಿದಾಗ ಸದರಿ ದಾಖಲೆಯನ್ನೇ ನಾನು ಮೃತ ವೀರಭದ್ರಪ್ಪ ರವರ ಜೀವಿತ ಕಾಲದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ನೋಡಿ ತಿಳಿದುಕೊಂಡ ದಾಖಲೆ ಆಗಿರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ನಿ.ಪಿ-3 ರ ಮುಟೇಷನ್ ರಿಜಿಸ್ಟರ ಪ್ರತಿಯಲ್ಲಿ ಮೃತ ವೀರಭದ್ರಪ್ಪ ರವರಿಗೆ ಬೇರೆ ಕಡೆ ಹಿಸ್ಸೇಯನ್ನು

ನೀಡಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿ.ಪಿ-3 ರ ಡ ಮಂಜೂರಿಗೆ ವೀರಭದ್ರಪ್ಪ ರವರು ತಮ್ಮ ಜೀವಿತಾವಧಿಯಲ್ಲಿ ತಕರಾರನ್ನು ಸಲ್ಲಿಸಿದ್ದು, ನಿಖರವಾಗಿ ಯಾವ ವರ್ಷದಲ್ಲಿ ತಕರಾರನ್ನು ಸಲ್ಲಿಸಿದ್ದಾರೆಂದು ಗೊತ್ತಿಲ್ಲ. ಪ್ರತಿವಾದಿಗಳು ದಾವೆಯಲ್ಲಿ ಸಲ್ಲಿಸಿರುವ ಪ್ರತಿವಾದ ಪತ್ರವನ್ನು ನಾನು ಪರಿಶೀಲಿಸಿರುವುದಿಲ್ಲ. ಇವತ್ತಿನವರೆಗೂ ವೀರಭದ್ರಪ್ಪ ರವರಾಗಲೀ ಅಥವಾ ಆತನ ವಾರಸುದಾರರಾಗಲೀ ನಿ.ಪಿ-3 ರ ಡ ಮಂಜೂರಿಗೆ ತಕರಾರನ್ನು ಸಲ್ಲಿಸದಿದ್ದರೂ ಆತನ ಮಗನ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

6. ಮೂಲ ಪುರುಷ ಬುರಾಣಪ್ಪ ರವರ ಮಕ್ಕಳು ಒಟ್ಟು ಕುಟುಂಬದ ಆಸ್ತಿಯಲ್ಲಿ ಎಷ್ಟು ವಿಸ್ತೀರ್ಣದ ಜಮೀನುಗಳನ್ನು ಮತ್ತು ಯಾವ ಜಮೀನುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆಂದು ನನಗೆ ಗೊತ್ತಿಲ್ಲ. ವೀರಭದ್ರಪ್ಪ ರವರು ತನ್ನ ಹಿಸ್ಸೇಗೆ ಬಂದ ಜಮೀನುಗಳಲ್ಲಿ ಕೆಲವೊಂದು ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ. ಸದರಿ ವೀರಭದ್ರಪ್ಪ ರವರು ತಮ್ಮ ಜೀವಿತಾವಧಿಯಲ್ಲಿ ಸುಮಾರು 30 ಗುಂಟೆ ಜಮೀನನ್ನು ವೀರಭದ್ರಪ್ಪ ಬ್ಯಾಡಗಿ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ಮೃತ ವೀರಭದ್ರಪ್ಪ ರವರಿಗೆ ಕುಟುಂಬದ ಜಮೀಗಳಲ್ಲದೇ ಪಂಚಾಯಿತಿ ಆಸ್ತಿಗಳಲ್ಲಿಯೂ ಸಹ ಹಿಸ್ಸೇ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಆತನಿಗೆ ಪಂಚಾಯಿತಿ ಆಸ್ತಿಗಳಲ್ಲಿಯೂ ಹಿಸ್ಸೇಯಲ್ಲಿ ಬಂದಿರುವ ವಿಷಯ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯನ್ನು 1 ರಿಂದ 9ನೇ ಪ್ರತಿವಾದಿಗಳು ಮಾತ್ರ ವಹಿವಾಟು ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವೀರಭದ್ರಪ್ಪನ ವಾರಸು ದಾರರು ಪ್ರತಿವಾದಿಗಳ ಜೊತೆಗೆ ಸಾಮೂಹಿಕವಾಗಿ ವಹಿವಾಟು ಮಾಡುತ್ತಿದ್ದಾರೆ. ವಾದಿಗಳು ದಾವಾ ಆಸ್ತಿಯ ಒಟ್ಟು ಕ್ಷೇತ್ರದ ಪೈಕಿ ಪ್ರತ್ಯೇಕವಾಗಿ ವಹಿವಾಟು ಮಾಡುತ್ತಿದ್ದು, ಎಷ್ಟು ಕ್ಷೇತ್ರವನ್ನು ವಹಿವಾಟು ಮಾಡುತ್ತಿದ್ದಾರೆ ಎಂದು ನಿಖರವಾಗಿ ಗೊತ್ತಿಲ್ಲ. ವಾದಿಗಳು

ಪ್ರತಿವಾದಿಯ ಹಿಸ್ಸೇಗೆ ಬಂದ ದಾವಾ ಆಸ್ತಿಯ ಭಾಗದ ಪಕ್ಕದ ಹಿಸ್ಸೇಯ ಜಮೀನನ್ನು ವಹಿವಾಟು ಮಾಡುತ್ತಿದ್ದಾರೆ. ದಾವಾ ಆಸ್ತಿಗಳನ್ನು ಸಂಪೂರ್ಣವಾಗಿ ಪ್ರತಿವಾದಿಗಳು ವಹಿವಾಟು ಮಾಡುತ್ತಿದ್ದು, ಆದರೆ ದಾವಾ ಆಸ್ತಿ ಒಟ್ಟು ಕ್ಷೇತ್ರದ ಪೈಕಿ ಭಾಗದ ಜಮೀನನ್ನು ವಾದಿಗಳು ವಹಿವಾಟು ಮಾಡುತ್ತಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ದಾವೆಯ ಸಂಗತಿಗಳ ಬಗ್ಗೆ ಮತ್ತು ದಾವಾ ಆಸ್ತಿಯ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿಗಳು ಇಲ್ಲದಿದ್ದರೂ ಮೃತ ವೀರಭದ್ರಪ್ಪ ರವರ ಮಗನ ಮಾತನ್ನು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4 ರಿಂದ 7 ಮತ್ತು 9 ನೇ ಪ್ರತಿವಾದಿಗಳ ಪರ ಶ್ರೀ ಎಂ.ಹೆಚ್.ಎಂ ವಕೀಲರಿಂದಃ**

1 ನೇ ಪ್ರತಿವಾದಿಯ ಪರ ವಕೀಲರು ಮೇಲಿನಂತೆ ಮಾಡಿದ ಪಾಟೀ ಸವಾಲನ್ನು ಅನುಮೋದಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.

**Sd/-**

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ